# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** | : | 200 |
| **ಸದಸ್ಯರ ಹೆಸರು** | : | ಶ್ರೀ ಯು.ಬಿ ವೆಂಕಟೇಶ್<br>(ನಾಮನಿರ್ದೇಶನ ಹೊಂದಿದವರು) |
| **ಉತ್ತರಿಸುವ ದಿನಾಂಕ** | : | ದಿನಾಂಕ:06.12.2023 |
| **ಉತ್ತರಿಸುವ ಸಚಿವರು** | : | ಮಾನ್ಯ ಕಂದಾಯ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ದಕ್ಷಿಣ ತಾಲ್ಲೂಕು. ಉತ್ತರಹಳ್ಳಿ, ಹೋಬಳಿ ವಾಜರಹಳ್ಳಿ ಗ್ರಾಮದ ಸರ್ವೆ ನಂ.64ರ ವಿಸ್ತೀರ್ಣ 4 ಎಕರೆ 11 ಗುಂಟೆ ಜಮೀನು ಭೂಸ್ವಾಧೀನವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? | ಹೌದು |
| ಆ) | ಬಂದಿದ್ದಲ್ಲಿ, ಸದರಿ ಜಮೀನುಗಳು ಯಾವಾಗ ಭೂಸ್ವಾಧೀನಗೊಂಡಿವೆ;? ಸದರಿ ಜಮೀನುಗಳ ಸಂಬಂಧ ಭೂಮಾಲೀಕರಿಗೆ ಎಷ್ಟು ಮೊತ್ತದ ಪರಿಹಾರವನ್ನು ನೀಡಲಾಗಿದೆ; | **ಬಾಲಾಜಿ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ ಪರವಾಗಿ ಭೂಸ್ವಾಧೀನ ವಿವರ:**<br>• ಕಲಂ 4(1)ರ ಅಧಿಸೂಚನೆ ದಿನಾಂಕ: 03-09-1988 ರಂತೆ ಪ್ರಶ್ನಿತ ವಾಜರಹಳ್ಳಿ ಗ್ರಾಮದ ಸ.ನಂ.64 ರಲ್ಲಿ ಶ್ರೀ ನರಸಿಂಹಯ್ಯ, ಶ್ರೀ ಮುನಿಭೈರಪ್ಪ, ಶ್ರೀ ನಾಣಯ್ಯ ಇವರ ಹೆಸರಿನಲ್ಲಿರುವ 4-10 ಎ/ಗುಂ, ಖರಾಬು 00-08 ಗುಂಟೆ ಸೇರಿ ಒಟ್ಟು 4-18 ಎ/ಗುಂ ಸೇರಿದಂತೆ ಐನು 64-19 ಎ.ಗುಂ. ಖರಾಬು 3-16ಎ.ಗುಂ. ಒಟ್ಟು 67-35 ಎ.ಗುಂ. ಜಮೀನು ಅಧಿಸೂಚಿತವಾಗಿರುತ್ತದೆ.<br>• ಕಲಂ 6(1) ಅಧಿಸೂಚನೆ ದಿನಾಂಕ: 27-09-1989 ರಂತೆ ವಾಜರಹಳ್ಳಿ ಗ್ರಾಮದ ಸ.ನಂ.64 ರಲ್ಲಿ ಶ್ರೀ ನರಸಿಂಹಯ್ಯ, ಶ್ರೀ ಮುನಿಭೈರಪ್ಪ, ಶ್ರೀ ಸೀನಪ್ಪ ಇವರ ಹೆಸರಿನಲ್ಲಿರುವ 4-03 ಎ/ಗುಂ, 00-08 ಗುಂಟೆ ಖರಾಬು ಸೇರಿ ಒಟ್ಟು 4-11 ಎ/ಗುಂ ಜಮೀನು ಸೇರಿದಂತೆ ಐನು 56-03 ಎ.ಗುಂ. ಖರಾಬು |

03-14 ಎ.ಗುಂ. ಒಟ್ಟು 59-17-08 ಎ.ಗುಂ.ಆ. ಜಮೀನು ಶ್ರೀ ಬಾಲಾಜಿ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ ರವರ ಪರವಾಗಿ ಅಧಿಸೂಚಿತವಾಗಿರುತ್ತದೆ.

- ದಿನಾಂಕ: 31-12-1990 ರಲ್ಲಿ ವಾಜರಹಳ್ಳಿ ಗ್ರಾಮದ ಸ.ನಂ.64 ರಲ್ಲಿ ಒಟ್ಟು 4-11 ಎ/ಗುಂ ಜಮೀನಿಗೆ ಒಪ್ಪಿಗೆ ಐತೀರ್ಪು ರಚಿಸಲಾಗಿರುತ್ತದೆ. ಸದರಿ ಐತೀರ್ಪಿನಂತೆ ಖಾತೆದಾರರಾದ ಶ್ರೀ ನರಸಿಂಹಯ್ಯ ರವರು ಜಿ.ಪಿ.ಎ ದಾರರಾದ ಶ್ರೀ ಎನ್.ಆರ್ ಶಿವಕುಮಾರ್ ರವರ ಮುಖಾಂತರ ಭೂಕೋರಿಕಾ ಸಂಸ್ಥೆಯವರಿಂದ ರೂ.4,92,760/- ಗಳ ಭೂಪರಿಹಾರವನ್ನು ಪಡೆದಿರುತ್ತಾರೆ.

**ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ ಪರವಾಗಿ ಭೂಸ್ವಾಧೀನ ವಿವರ:**

- ಕಲಂ 4(1) ಅಧಿಸೂಚನೆ ದಿನಾಂಕ: 18.02.1997 ರಂತೆ ಪ್ರಶ್ನಿತ ವಾಜರಹಳ್ಳಿ ಗ್ರಾಮದ ಸ.ನಂ.64 ರಲ್ಲಿ 0-09 ಗುಂಟೆ ಜಮೀನು ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ ಪರವಾಗಿ ಅಧಿಸೂಚಿತವಾಗಿರುತ್ತದೆ.
- ಕಲಂ 6(1) ಅಧಿಸೂಚನೆ ದಿನಾಂಕ: 18-09-1998 ರಂತೆ ವಾಜರಹಳ್ಳಿ ಗ್ರಾಮದ ಸ.ನಂ.64/2 ರಲ್ಲಿ 0-05 3/4 ಗುಂಟೆ + 0-00 1/4 ಗುಂಟೆ ಖರಾಬು ಒಟ್ಟು 0-06 ಗುಂಟೆ ಜಮೀನು ಬಿ.ಡಬ್ಲ್ಯೂ ಎಸ್.ಎಸ್.ಬಿ ಇಲಾಖೆ ಪರವಾಗಿ ಅಧಿಸೂಚಿತವಾಗಿರುತ್ತದೆ.
- ನಂತರದಲ್ಲಿ ದಿನಾಂಕ: 15-12-2000 ರಲ್ಲಿ ವಾಜರಹಳ್ಳಿ ಗ್ರಾಮದ ಸ.ನಂ.64/2 ರಲ್ಲಿ 0-05 3/4 ಗುಂಟೆ + 0-00 1/4 ಗುಂಟೆ ಖರಾಬು ಒಟ್ಟು 0-06 ಗುಂಟೆ ಜಮೀನಿಗೆ ಸಾಮಾನ್ಯ ಐತೀರ್ಪು ರಚಿಸಲಾಗಿರುತ್ತದೆ.
- ಎಲ್ಎಸಿ/98/98-99 ರಂತೆ ದಿನಾಂಕ: 23-02-2000 ರಂದು ಕಲಂ 12(2) ರಂತೆ 05 3/4 ಗುಂಟೆ ಜಮೀನಿಗೆ ಅವಾರ್ಡ್ ನೋಟೀಸ್‌ನ್ನು ಭೂಮಾಲೀಕರಿಗೆ ಜಾರಿ ಮಾಡಲಾಗಿರುತ್ತದೆ.

| | | |
|---|---|---|
| | | • ಸದರಿ ಸಾಮಾನ್ಯ ಐತೀರ್ಪಿನಂತೆ ಖಾತೆದಾರರಾದ ಶ್ರೀ ಸೀನಪ್ಪ ಬಿನ್ ಲೇಟ್ ಶಾನಪ್ಪ ರವರು ವಾಜರಹಳ್ಳಿ ಗ್ರಾಮದ ಸ.ನಂ.64/2 ರಲ್ಲಿ 05 3/4 ಗುಂಟೆ ಜಮೀನಿಗೆ ರೂ.**87,608**,/- ಗಳ ಭೂಪರಿಹಾರವನ್ನು ದಿನಾಂಕ: 21-12-2000 ರಂದು ಪಡೆದಿರುತ್ತಾರೆ.<br><br>**ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ:**<br><br>• ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಅಂತಿಮ ಅಧಿಸೂಚನೆ ಸಂಖ್ಯೆ: ನಅಇ 750 ಬೆಂಭೂಸ್ವಾ 2003, ಬೆಂಗಳೂರು ದಿನಾಂಕ: 09-09-2003ರಂತೆ ಶ್ರೀ ಮುನಿಭೈರಪ್ಪ ಮತ್ತು ಶ್ರೀ ಸೀನಪ್ಪ ಇವರ ಹೆಸರಿನಲ್ಲಿರುವ ಸರ್ವೇ ನಂ.64/2ರಲ್ಲಿ 00-16 ಎ.ಗುಂ. ಜಮೀನಿಗೆ ರಾಜ್ಯಪತ್ರದಲ್ಲಿ ಅಧಿಸೂಚನೆ ಹೊರಡಿಸ ಲಾಗಿರುತ್ತದೆ ಹಾಗೂ ರೂ.5,66,051/-ಗಳ ಐತೀರ್ಪಿನ ಪರಿಹಾರದ ಮೊತ್ತವನ್ನು ದಿನಾಂಕ: 13-06-2005ರ ಪತ್ರದಂತೆ ಪ್ರಿನ್ಸಿಪಲ್ ಸಿಟಿ ಸಿವಿಲ್ ನ್ಯಾಯಾಲಯ, ಬೆಂಗಳೂರು ಇಲ್ಲಿ ಠೇವಣಿ ಇಡಲಾಗಿದೆ. |
| ಇ) | ಭೂಮಾಲೀಕರಿಂದ ಎಷ್ಟು ಎಕರೆ ಭೂಮಿಯನ್ನು ವಶಕ್ಕೆ ಪಡೆಯಲಾಗಿದೆ; ಉಳಿಕೆ ಭೂಮಿಯನ್ನು ವಶಕ್ಕೆ ಪಡೆಯಲು ವಿಳಂಬ ನೀತಿಯನ್ನು ಅನುಸರಿಸಲು ಕಾರಣವೇನು: | ಬಾಲಾಜಿ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ ಪರವಾಗಿ ಭೂಸ್ವಾಧೀನ ವಿವರ:<br><br>• ಅಧಿಸೂಚಿತ ಜಮೀನಿನಲ್ಲಿ 1-35 ಎ.ಗುಂ. ಜಮೀನನ್ನು ವಶಕ್ಕೆ ಪಡೆದು ದಾಖಲೆಯಂತೆ ಬಾಲಾಜಿ ಗೃಹ ನಿರ್ಮಾಣ ಸಹಕಾರ ಸಂಘಕ್ಕೆ ನೀಡಲಾಗಿರುತ್ತದೆ. ಬಿ.ಡಬ್ಲ್ಯೂ.ಎಸ್.ಎಸ್.ಬಿ. ಯು ದಿನಾಂಕ: 15-12-2000 ರಲ್ಲಿ ವಾಜರಹಳ್ಳಿ ಗ್ರಾಮದ ಸ.ನಂ.64/2 ರಲ್ಲಿ 00-06 ಗುಂಟೆ ಜಮೀನನ್ನು ವಶಕ್ಕೆ ಪಡೆಯಲಾಗಿದೆ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು 00-16 ಗುಂಟೆ ಜಮೀನನ್ನು ಬಡಾವಣೆಯ ರಸ್ತೆ ನಿರ್ಮಾಣಕ್ಕಾಗಿ ಸ್ವಾಧೀನ ಪಡಿಸಿಕೊಳ್ಳಲಾಗಿದೆ. |

| | | |
|---|---|---|
| | | • ಭೂಮಾಲೀಕರಾದ ಶ್ರೀ ಸೀನಪ್ಪ ಹಾಗೂ ಶ್ರೀ ಮುನಿಭೈರಪ್ಪ ರವರು ಭೂಸ್ವಾಧೀನತೆಯನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಡಬ್ಲ್ಯೂಪಿ ನಂ. 29481/1994 ರಂತೆ ಪ್ರಕರಣ ದಾಖಲಿಸಿದ್ದು, ದಿನಾಂಕ: 10-03-1998ರ ಆದೇಶದಲ್ಲಿ ಪ್ರಕರಣ ವಜಾಗೊಂಡಿರುತ್ತದೆ.<br><br>• ಭೂಸ್ವಾಧೀನ ಕಾಯ್ದೆ ಭೂಸ್ವಾಧೀನ ಕಾಯ್ದೆ ಕಲಂ-47 ರಂತೆ ಉಪವಿಭಾಗಾಧಿಕಾರಿಗಳು, ಬೆಂಗಳೂರು ದಕ್ಷಿಣ ಉಪವಿಭಾಗ, ಬೆಂಗಳೂರು ರವರಿಗೆ ಪ್ರಶ್ನಿತ ಉಳಿಕೆ ಜಮೀನಿನ ಸುಬರ್ದನ್ನು ಪಡೆದು ಭೂಕೋರಿಕಾ ಸಂಸ್ಥೆಯವರಿಗೆ ವಹಿಸಿಕೊಡುವಂತೆ ದಿನಾಂಕ: 14-01-1999, ದಿ:20-04-1999 ರಂದು ಪತ್ರ ಬರೆಯಲಾಗಿರುತ್ತದೆ. |
| ಈ | ಸದರಿ ಭೂ ಮಾಲೀಕರು ಭೂ ಪರಿಹಾರವನ್ನು ಪಡೆದಿರುವ ಬಗ್ಗೆ ಹಾಗೂ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ಭೂ ಮಾಲೀಕರಿಂದ ಭೂಮಿಯನ್ನು ವಶಕ್ಕೆ ಪಡೆಯಲು ವಿಳಂಬ ನೀತಿ ಅನುಸರಿಸಲು ಕಾರಣವೇನು; | ಬಾಲಾಜಿ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ ಪರವಾಗಿ ಭೂಸ್ವಾಧೀನ ವಿವರ:<br><br>• ದಿನಾಂಕ: 31-12-1990 ರಲ್ಲಿ ವಾಜರಹಳ್ಳಿ ಗ್ರಾಮದ ಸ.ನಂ.64ರಲ್ಲಿ ಒಟ್ಟು 4-11ಎ/ಗುಂ ಜಮೀನಿಗೆ ಒಪ್ಪಿಗೆ ಐತೀರ್ಪ ರಚಿಸಲಾಗಿರುತ್ತದೆ. ಸದರಿ ಐತೀರ್ಪಿನಂತೆ ಖಾತೆದಾರರಾದ ಶ್ರೀ ನರಸಿಂಹಯ್ಯ ರವರು ಜಿ.ಪಿ.ಎ.ದಾರರಾದ ಶ್ರೀ ಎನ್.ಆರ್.ಶಿವಕುಮಾರ್ರವರ ಮುಖಾಂತರ ಭೂಕೋರಿಕಾ ಸಂಸ್ಥೆಯವರಿಂದ ರೂ.4,92,760/-ಗಳ ಭೂಪರಿಹಾರವನ್ನು ಪಡೆದಿರುತ್ತಾರೆ.<br><br>• ಭೂಮಾಲೀಕರಾದ ಶ್ರೀ ಸೀನಪ್ಪ ಹಾಗೂ ಶ್ರೀ ಮುನಿಭೈರಪ್ಪ ರವರು ಭೂಸ್ವಾಧೀನತೆಯನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಡಬ್ಲ್ಯೂಪಿ ನಂ. 29481/1994 ರಂತೆ ಪ್ರಕರಣ ದಾಖಲಿಸಿದ್ದು, ದಿನಾಂಕ: 10-03-1998ರ ಆದೇಶದಲ್ಲಿ ಪ್ರಕರಣ ವಜಾಗೊಂಡಿರುತ್ತದೆ. |

| | | |
|---|---|---|
| | | • ಭೂಸ್ವಾಧೀನ ಕಾಯ್ದೆ 1894ರ ಕಲಂ-47 ರಂತೆ ಉಪವಿಭಾಗಾಧಿಕಾರಿಗಳು, ಬೆಂಗಳೂರು ದಕ್ಷಿಣ ಉಪವಿಭಾಗ, ಬೆಂಗಳೂರು ರವರಿಗೆ ಪ್ರಶ್ನಿತ ಉಳಿಕೆ ಜಮೀನಿನ ಸುಬರ್ದನ್ನು ಪಡೆದು ಭೂಕೋರಿಕಾ ಸಂಸ್ಥೆಯವರಿಗೆ ವಹಿಸಿಕೊಡುವಂತೆ ದಿನಾಂಕ: 14-01-1999 ಮತ್ತು 20-04-1999 ರಂದು ಪತ್ರ ಬರೆಯಲಾಗಿರುತ್ತದೆ. |
| ಉ | ಸದರಿ ಸರ್ವೇ ನಂ.64ರ ಜಮೀನನ್ನು ಭೂ ಪರಿಹಾರ ನೀಡಿರುವ ಹೊರತಾಗಿಯೂ ಅಕ್ರಮವಾಗಿ ಪೋಡಿ ಮಾಡಿ ಭೂ ಮಾಲೀಕರಿಗೆ ಖಾತೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅಕ್ರಮ ಖಾತೆಯನ್ನು ಮಾಡಿರುವ ಅಧಿಕಾರಿಗಳ ವಿರುದ್ಧ ಕೈಗೊಂಡಿರುವ ಕ್ರಮಗಳೇನು? | ಭೂಸ್ವಾಧೀನವಾಗಿರುವ ಜಮೀನನ್ನು ಖಾತೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ .<br><br>ಖಾತೆ ಹಾಗೂ ಪೋಡಿ ಮಾಡಿರುವ ಸಂಬಂಧ ಪರಿಶೀಲಿಸಿ ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮಕ್ಕಾಗಿ ವರದಿ ಸಲ್ಲಿಸುವಂತೆ ಸೂಚಿಸಿ ಜಿಲ್ಲಾಧಿಕಾರಿಗಳು, ಬೆಂಗಳೂರು ಇವರು ದಿನಾಂಕ:20-11-2023 ರಂದು ಉಪವಿಭಾಗಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಹಾಗೂ ಪದನಿಮಿತ್ತ ಭೂದಾಖಲೆಗಳ ಉಪ ನಿರ್ದೇಶಕರಿಗೆ ಪತ್ರ ಬರೆಯಲಾಗಿರುತ್ತದೆ. |

**ಸಂಖ್ಯೆ:ಕಂಇ 116 ಎಕ್ಯೂಬಿ 2023**

**(ಕೃಷ್ಣ ಭೈರೇಗೌಡ)**
ಕಂದಾಯ ಸಚಿವರು